# ಕರ್ನಾಟಕ ವಿಧಾನ ಪರಿಷತ್

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 807(1095)
2. ಸದಸ್ಯರ ಹೆಸರು : ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 21.12.2021
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದೇವನಹಳ್ಳಿ ತಾಲ್ಲೂಕಿನ ಪಾಳ್ಯ ಕೈಗಾರಿಕಾ ಪ್ರದೇಶದ ಯೋಜನೆಗೆ ಭೂಸ್ವಾಧೀನ ಪಡಿಸಿಕೊಂಡ ಚನ್ನರಾಯಪಟ್ಟಣದ ಹೋಬಳಿಯ ಪೋಲನಹಳ್ಳಿ ಗ್ರಾಮದ ಸರ್ವೆ ನಂ.34/2 ಮತ್ತು 33/2ರ ಒಟ್ಟು 3.16 ಎಕರೆ ಜಮೀನಿನ ಖಾತೆದಾರರು ಯಾರ್ಯಾರು; (ವಿವರ ನೀಡುವುದು) | ಪಾಳ್ಯ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನಪಡಿಸಿದ ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿ, ಪೋಲನಹಳ್ಳಿ ಗ್ರಾಮದ ಸರ್ವೆ ನಂ. 34/2 ಮತ್ತು 33/2 ರಲ್ಲಿ ಒಟ್ಟು 3-16 ಎಕರೆ ಜಮೀನಿನ ಅಧಿಸೂಚಿತ ಖಾತೆದಾರರ ವಿವರ ಈ ಕೆಳಕಂಡಂತಿದೆ<br>1. ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>2. ಶ್ರೀ ವೈ.ಸಿ. ನಾರಾಯಣಸ್ವಾಮಿ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>3. ಶ್ರೀ ವೈ.ಸಿ. ರಾಮಕೃಷ್ಣ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>4. ಶ್ರೀ ವೈ.ಸಿ. ರಮೇಶ್ ಬಿನ್ ಲೇಟ್ ಚಿಕ್ಕಬಚ್ಚಪ್ಪ<br>5. ಶ್ರೀ ವೈ.ಸಿ. ಸುರೇಶ್ ಲೇಟ್ ಚಿಕ್ಕಬಚ್ಚಪ್ಪ<br>6. ಶ್ರೀ ರವೀಂದ್ರ ಬಿನ್ ಲೇಟ್ ಮರಿಯಪ್ಪ<br>7. ಶ್ರೀ ಕಿರಣ್ ಕುಮಾರ್ ಬಿನ್ ಲೇಟ್ ಮರಿಯಪ್ಪ |
| (ಆ) | ಎಲ್ಲಾ ಖಾತೆದಾರರಿಗೆ ಸಿಗಬೇಕಾದ ಭೂ ಪರಿಹಾರ ಮೊತ್ತವನ್ನು ಉಳಿದ ಖಾತೆದಾರರಿಗೆ ಗಮನಕ್ಕೆ ಬಾರದೇ ಕೇವಲ ಒಬ್ಬ ಖಾತೆದಾರರಿಗೆ ಮಾತ್ರ | ಪ್ರಸ್ತಾವಿತ ಜಮೀನಿನ ಜಂಟಿ ಖಾತೆ ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ ಮತ್ತು ಇತರರು ಹೆಸರಿನಲ್ಲಿ ನಮೂದಾಗಿದ್ದು ಈ ಪೈಕಿ ಶ್ರೀ ವೈ.ಸಿ. ಶ್ರೀನಿವಾಸ್ ಬಿನ್ ಲೇಟ್ ಚಿಕ್ಕಬಚ್ಚಪ್ಪ ಇವರು ದಿನಾಂಕ: 12.01.2021ರಂದು |

| | | |
|---|---|---|
| | ಪಾವತಿಸುವ ಮೂಲಕ ಉಳಿದ ಖಾತೆದಾರರಿಗೆ ಅನ್ಯಾಯ ಮಾಡಿದಂತೆ ಆಗಲಿಲ್ಲವೇ; | ಭೂಪರಿಹಾರ ಪಾವತಿಸುವಂತೆ ಕೋರಿ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರಿಗೆ ಮನವಿ ಸಲ್ಲಿಸಿ, ದಿನಾಂಕ: 20.03.2021ರಂದು ನೋಟರಿ ಆಧಾರಿತ ಪ್ರಮಾಣ ಪತ್ರವನ್ನು ಸಲ್ಲಿಸಿ, ತಮಗೆ ಮೇಲ್ಕಂಡ ಜಮೀನಿನ ಪರಿಹಾರ ಪಾವತಿಸಲು ಇತರ ಖಾತೆದಾರರು ಒಪ್ಪಿರುವುದಾಗಿ ತಿಳಿಸಿರುತ್ತಾರೆ.<br><br>ಈ ಕೋರಿಕೆಯನ್ನು ಪರಿಗಣಿಸಿ, ಪೋಲನಹಳ್ಳಿ ಗ್ರಾಮದ ಸರ್ವೆ ನಂ. 33/2 ರ 2-26.8 ಎಕರೆ ಜಮೀನಿನ ಪರಿಹಾರ ಮೊತ್ತ ರೂ.2,92,87,500/-ಗಳನ್ನು ದಿನಾಂಕ: 26.03.2021 ರಂದು ಮತ್ತು ಸರ್ವೆ ನಂ. 34/2ರ 0-28 ಗುಂಟೆ ಜಮೀನಿನ ಪರಿಹಾರ ಮೊತ್ತ ರೂ.77,00,000/-ಗಳನ್ನು ದಿನಾಂಕ: 20.04.2021 ರಂದು ಆರ್.ಟಿ.ಜಿ.ಎಸ್. ಮುಖಾಂತರ ಶ್ರೀ ವೈ.ಸಿ. ಶ್ರೀನಿವಾಸ್ ಇವರಿಗೆ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ವರದಿ ಪಾವತಿಸಿರುತ್ತಾರೆ.<br><br>ತದನಂತರ, ಸದರಿ ಜಮೀನಿನ ಪರಿಹಾರ ಪಾವತಿ ಬಗ್ಗೆ ಶ್ರೀ ರಮೇಶ್ ವೈ.ಸಿ. ಬಿನ್ ಲೇಟ್ ಚಿಕ್ಕಬಚ್ಚಪ್ಪ ಮತ್ತು ಸುರೇಶ್ ವೈ.ಸಿ. ಬಿನ್ ಚಿಕ್ಕಬಚ್ಚಪ್ಪ ಇವರು ಆಕ್ಷೇಪ ವ್ಯಕ್ತಪಡಿಸಿ, ದಿನಾಂಕ 09.06.2021 ಮತ್ತು 17.06. ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರಿಗೆ ಮನವಿ ಸಲ್ಲಿಸಿ, ತಮ್ಮ ಸಹಿಯನ್ನು ನಕಲು ಮಾಡಿ ಪರಿಹಾರವನ್ನು ಪಡೆದಿರುವುದಾಗಿ ತಿಳಿಸಿ, ತಮಗೆ ಹಾಗೂ ತಮ್ಮ ಸಹೋದರರಿಗೆ ಈ ಜಮೀನಿನಲ್ಲಿ ಸಮ ಭಾಗವಿದ್ದು ಅದರಂತೆ ಪರಿಹಾರವನ್ನು ಪಾವತಿಸುವಂತೆ ಕೋರಿರುತ್ತಾರೆ.<br><br>ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. |
| (ಇ) | ಭೂ ಪರಿಹಾರ ಹಂಚಿಕೆಯಲ್ಲಿ ಈ ರೀತಿ ತಾರತಮ್ಯ ಹಾಗೂ ನ್ಯೂನತೆಗೆ ಕಾರಣವೇನು; ಇಂಥಹ ಪ್ರಕರಣಗಳು ಎಷ್ಟು ಇವೆ; (ಪ್ರಕರಣವಾರು ವಿವರ ಒದಗಿಸುವುದು) | |
| (ಈ) | ಸದರಿ ಜಮೀನಿನ ಉಳಿದ ಖಾತೆದಾರರಿಗೆ ಭೂ ಪರಿಹಾರ ಒದಗಿಸಲು ಯಾವ ನಿರ್ದಿಷ್ಟ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು? | |

| | | |
|---|---|---|
| | | ಇವರು ದಿನಾಂಕ: 17.06.2021 ರಂದು ಕ್ಲೇಮ್‌ದಾರರು ಮತ್ತು ದೂರುದಾರರುಗಳಿಗೆ ನೋಟೀಸ್ ಜಾರಿ ಮಾಡಿ, ದಿನಾಂಕ 21.06.2021 ರಂದು ವಿಚಾರಣೆ ನಡೆಸಿದ್ದು, ವಿಚಾರಣಾ ವೇಳೆಯಲ್ಲಿ ಉಭಯತ್ರರರು ರಾಜಿ ಸಂಧಾನ ಮಾಡಿಕೊಂಡಿದ್ದು, ದಿನಾಂಕ 28.06.2021 ರಂದು ಇನ್ನು ಮುಂದೆ ಏನೇ ತಂಟೆ-ತಕರಾರುಗಳು ಬಂದಲ್ಲಿ ತಾವುಗಳೇ ಬಗೆಹರಿಸಿಕೊಳ್ಳುವುದಾಗಿ ಹಾಗೂ ಈ ಕುರಿತು ತಕರಾರು ಅರ್ಜಿ ಸಲ್ಲಿಸುವುದಾಗಲೀ, ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸುವುದಾಗಲೀ, ದಾವೆ ದಾಖಲು ಮಾಡುವುದಾಗಲೀ ಅಥವಾ ನ್ಯಾಯಾಲಯಗಳಲ್ಲಿ ಭಾಗಾಂಶಕ್ಕೆ ದಾವೆ ಹೂಡುವುದಾಗಲೀ ಮಾಡುವುದಿಲ್ಲವೆಂದು ಪ್ರಮಾಣ ಪತ್ರ ವಿಶೇಷ ಭೂಸ್ವಾಧೀನಾಧಿಕಾರಿ-2, ಕೆ.ಐ.ಎ.ಡಿ.ಬಿ. ಇವರು ವರದಿ ಮಾಡಿರುತ್ತಾರೆ.<br><br>ಮುಂದುವರೆದು, ವಿಶೇಷ ಭೂಸ್ವಾಧೀನಾಧಿಕಾರಿಯವರು ಅರೆ ನ್ಯಾಯಿಕ ಪ್ರಾಧಿಕಾರವಾಗಿದ್ದು ಕೆ.ಐ.ಎ.ಡಿ ನಿಯಮ 1966 ರ ನಿಯಮ 14 ರಡಿ ಪರಿಹಾರ ಪಾವತಿಸುವ ಅಧಿಕಾರವು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಪ್ರದತ್ತವಾಗಿರುತ್ತದೆ.<br><br>ಅದರಂತೆ ವಿಶೇಷ ಭೂಸ್ವಾಧೀನಾಧಿಕಾರಿಯವರ ಹಂತದಲ್ಲಿಯೇ ಪರಿಹಾರ ಪಾವತಿಸಲು ಮೇಲಿನಂತೆ ಕ್ರಮ ವಹಿಸಿದ್ದು, ಪ್ರಸ್ತಾವಿತ ಸರ್ವೆ ನಂಬರುಗಳ ಪರಿಹಾರ ಪಾವತಿ ಕಾರ್ಯ ಪೂರ್ಣಗೊಂಡಿರುತ್ತದೆ. |

ಸಂಖ್ಯೆ: ಸಿಐ 260 ಐಎಪಿ (ಇ) 2021

(ಮುರುಗೇಶ್ ಆರ್. ನಿರಾಣಿ)

ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು